International Journal of Kannada Research
www.kannadajournal.com

**ISSN: 2454–5813**
IJKR 2024; 10(1): 183-186
© 2024 IJKR
www.kannadajournal.com
Received: 01-01-2024
Accepted: 06-02-2024

**ಡಾ.ಡಿ.ರವಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು, ಹುಣಸೂರು ತಾ॥, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಡಾ.ಡಿ.ರವಿ**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೂಡು, ಹುಣಸೂರು ತಾ॥, ಮೈಸೂರು ಜಿಲ್ಲೆ, ಕರ್ನಾಟಕ, ಭಾರತ

# ಹಾಲುಮತ ಸಮುದಾಯದ ಸಂಪ್ರದಾಯಕ ಕಲೆ 'ಡೊಳ್ಳುಕುಣಿತ'

**ಡಾ.ಡಿ.ರವಿ**

**DOI:** https://doi.org/10.22271/24545813.2024.v10.i1c.954

**ಪೀಠಿಕೆ**

ಕರ್ನಾಟಕದಲ್ಲಿ ನೆಲೆಸಿರುವ ಪ್ರಾಚೀನ ಬುಡಕಟ್ಟು ಸಮುದಾಯಗಳಲ್ಲಿ ಹಾಲುಮತದವರು ಒಬ್ಬರು. ಭಾರತಾದ್ಯಂತ ಹೆಚ್ಚಿನಸಂಖ್ಯೆಯಲ್ಲಿ ಕಂಡು ಬರುವ ಜನವರ್ಗಗಳಲ್ಲಿ ಈ ಸಮುದಾಯವೂ ಒಂದು. 'ಹಾಲುಮತ' ಎಂಬ ಹೆಸರಲ್ಲಿ ಸುಪರಿಚಿತವಾಗಿರುವ ಕುರುಬ ಕುಲ ಊರು ಕುರುಬರ ಜೊತೆಗೆ ಅತ್ಯಂತ ಆದಿವಾಸಿ ಬುಡಕಟ್ಟುಗಳಾಗಿ ಕಂಡುಬಂದಿದೆ. ಕುರುಬ ಪದವು 'ಕುರು' ಎಂಬ ಪದದಿಂದ ನಿಷ್ಪನ್ನಗೊಂಡಿದೆ. 'ಕುರು' ಪದ ಕುರಿಯನ್ನು ಸೂಚಿಸಿದೆ. ಹಾಗಾಗಿ ಕುರುಬ ಎಂದರೆ ಕುರಿಸಾಕುವವನು ಎಂಧರ್ಥ.ತಮಿಳಿನ ನಿಘಂಟು ತಜ್ಞ ಪಿಂಗಳಮುನಿ ಕುರುಬರನ್ನು 'ಕುರಿನಿಲಮನ್ನಾರ್' ಎಂದು ಕರೆದಿದ್ದಾನೆ. ತಮಿಳು ಪದವಾದ ಕುರುಂಬ–ಘುಛಿಇಜಜಟಿಛ ಎಂಬ ಅರ್ಥ ನೀಡಿದರೆ ಖಟಚಿತಜಡಿ ಎಂಬ ಇನ್ನೊಂದು ಅರ್ಥ ಕೂಡ ಇದೆ. ಉತ್ತರ ಮಲಬಾರಿನಲ್ಲಿ 'ಕುರುಂಬನಾಡು' ಎಂಬ ತಾಲ್ಲೂಕಿರುವುದೊಂದು ವಿಶೇಷ.

ಈ ಜನಾಂಗದ ಜನರು ಅಖಂಡ ಭಾರತದ ಕರ್ನಾಟಕ, ಆಂದ್ರ, ಕೇರಳ, ತಮಿಳುನಾಡು, ಮಧ್ಯಪ್ರದೇಶ, ಹಿಮಾಚಲಪ್ರದೇಶ, ಉತ್ತರಪ್ರದೇಶ, ಬಿಹಾರ ಮತ್ತು ಮಹಾರಾಷ್ಟ್ರ ಇನ್ನಿತರ ರಾಜ್ಯಗಳಲ್ಲಿ ವಿವಿಧ ಹೆಸರಿನಲ್ಲಿ ಕಂಡು ಬರುವ ಇವರು ಆಯಾ ಪ್ರದೇಶಗಳಿಗನುಗುಣವಾಗಿ ವಿವಿಧ ಪದ್ಧತಿಗಳನ್ನು ಅನುಸರಿಸಿವುದು ಕಂಡು ಬಂದಿದೆ. ಭಾರತದ ಪುರಾತನ ಜನ–ಸಮುದಾಯಗಳಲ್ಲೊಂದು ಎಂದು ಅಭಿಪ್ರಾಯಪಟ್ಟಿರುವ ವಿದ್ವಾಂಸ ಶ್ಯಾಂಸಿಂಗ್ ಇವರನ್ನು 'ಭಾರತದ ಕುರುಬರು–ರಾಜಪರಂಪರೆಯ ಬುಡಕಟ್ಟು'ಎಂದು ದಾಖಲಿಸಿದ್ದಾರೆ. ಕರ್ನಾಟಕದಲ್ಲಿ ವಾಸಿಸುವ ಕುರುಬರನ್ನು ಹಾಲುಮತದವರು ಎಂದು ಕರೆಯುವುದು ವಾಡಿಕೆ. ಕರ್ನಾಟಕದ ಬಹುದೊಡ್ಡ ಸಮಾಜವೇ ಆಗಿರುವ ಕುರುಬ ಸಮಾಜವನ್ನು ಪಶುಪಾಲಕರು, ಹಾಲುಮತಸ್ಥರು, ದನಗಾರರು, ಭಗೇಲರು, ಗಡ್ಡಿಯವರು ಮೊದಲಾಗಿ ಹಲವಾರು ಹೆಸರಿನಿಂದ ಕರೆಯುತ್ತಾರೆ. ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಇವರನ್ನು ಹಾಲುಮತಸ್ಥರು,ಅಂಡೇಕುರುಬರು, ಕಂಬಳಿಕುರುಬರು ಎಂಬ ಮೂರು ಪ್ರಧಾನ ಗುಂಪುಗಳನ್ನಾಗಿ ಕರೆಯುತ್ತಿರುವುದನ್ನು ಕಾಣಬಹುದು. ಆದಿಬುಡಕಟ್ಟುಗಳಾಗಿ ಕಾಡುಕುರುಬರು, ಜೇನುಕುರುಬರು, ಕಂಡು ಬರುತ್ತಾರೆ. ಕಾಡು ಸಂಸ್ಕೃತಿಯಿಂದ ನಾಡು ಸಂಸ್ಕೃತಿಗೆ ಪರಿವರ್ತನೆ ಹೊಂದಿರುವುದು ಈ ಸಮಾಜದ ಬೆಳವಣಿಗೆಯಲ್ಲಿ ಮಹತ್ತರ ಘಟ್ಟವಾಗಿದೆ. ಕಾಡು ಮತ್ತು ನಾಡಿನ ಸಂಸ್ಕೃತಿಗಳೆರಡನ್ನೂ ಇಂದಿಗೂ ಮೈಗೂಡಿಸಿಕೊಂಡಿರುವುದು ಈ ಸಮುದಾಯದ ವಿಶಿಷ್ಟ ಲಕ್ಷಣ. ಹಾಲುಮತ ಸಮಾಜವನ್ನು ಹೊಸ, ಹಳೆ, ಸಾಧ,ಕುಂಚಿ, ಮುಳ್ಳು, ಇನ್ನಿತರ ಹೆಸರುಗಳಿಂದ ಕರೆಯುವುದನ್ನು ಕಾಣಬಹುದು.

ವೈವಾಹಿಕ ಸಂಬಂಧಗಳಲ್ಲಿ ಹತ್ತಿ ಕಂಕಣ ಮತ್ತು ಉಣ್ಣೆಕಂಕಣದವರು ಎಂಬ ಎರಡು ಪ್ರಭೇಧಗಳಾಗಿ ವಿಂಗಡಿಸಿರುವುದಿದೆ. ಇವೆರಡು ಕಂಕಣದವರು ಪರಸ್ಪರ ದೊಡ್ಡಪ್ಪನ ಮತ್ತು ಚಿಕ್ಕಪ್ಪನ ಮಕ್ಕಳುಎಂದು ಗುರುತಿಸಲ್ಪಡುತ್ತಾರೆ. ಕುರುಬರಲ್ಲಿ ಕಂಡು ಬರುವ ಕುಲದ ಸಂಖ್ಯೆಯೆಷ್ಟು ಎಂದು ಕೇಳಿದರೆ ಒಂದು ಬಳ್ಳ ರಾಗಿ ನೆಲಕ್ಕೆ ಚೆಲ್ಲಿದರೆ ಅಲ್ಲಿ ಕಂಡು ಬರುವ ಪ್ರತಿಯೊಂದು ಕಣಕಣದ ರಾಗಿಯಷ್ಟೇ ಇದೆ ಎಂದು ಹೆಮ್ಮೆಯಿಂದ ಹೇಳುತ್ತಾರೆ. ಇವರಲ್ಲಿ ಹೆಚ್ಚಿನವರು ಮಾಂಸಹಾರಿಗಳು ಕೆಲವರು ಸಸ್ಯಹಾರಿಗಳೂ ಇದ್ದಾರೆ. ಆದರೆ 'ಪೂಜಾರಿಕೆ' ಮಾಡುವ ಕುಟುಂಬಗಳು ಲಿಂಗಧಾರಣೆ ಮಾಡಿಕೊಂಡು ಸಸ್ಯಾಹಾರಿಗಳಾಗಿದ್ದುಕೊಂಡು ಗುರುತಿಸಿಕೊಳ್ಳುತ್ತಾರೆ.

ಕುರುಬರಲ್ಲಿ ಒಂದೇ ಕುಲದವರಲ್ಲಿ ವಿವಾಹಗಳು ಏರ್ಪಡುವುದಿಲ್ಲವಾದರೂ ಏಕಕಾಲದಲ್ಲಿ ಪರಸ್ಪರ ಹೆಣ್ಣು ಕೊಟ್ಟು ಹೆಣ್ಣು ತರುವುದಕ್ಕೆ ನಿಷಿದ್ದವಿಲ್ಲ. ಬೀರೀದೇವರು ಮತ್ತು ಬೀರಪ್ಪ ಕುರುಬರ ಆರಾಧ್ಯ ದೈವ. ವಿವಾಹಕಾರ್ಯಗಳೆಲ್ಲವೂ ಈತನ ಹೆಸರಿನಲ್ಲಿ ನಡೆಯುತ್ತವೆ. ಲಗ್ನಪತ್ರಿಕೆ ಮೊದಲರಸಿನ ಶಾಸ್ತ್ರ, ಚಪ್ಪರದ ಶಾಸ್ತ್ರ ಎಲ್ಲವೂ ಪೂಜಾರಿಯ ಸಮ್ಮುಖದಲ್ಲಿ ನಡೆಯುತ್ತದೆ. ವಿವಾಹದ ದಿನದಂದು ಹೊಸಗಡಿಗೆಗಳಲ್ಲಿ ಮಡಿಯಾಗಿ ನೀರು ತಂದು ಅವುಗಲಲ್ಲಿ ಹೊಂಬಾಳೆ ಇರಿಸಿ ಕೊಠಡಿಯೊಂದರಲ್ಲಿ ಪೂಜಿಸುವುದು ಕುರುಬರಿಗೆ ಕಡ್ಡಾಯ. ಕುರುಬ ಸಮುದಾಯದಲ್ಲೂ ಕೆಲವು ನಂಬಿಕೆ–ಆಚರಣೆಗಳಿವೆ. ಹೆಣ್ಣು ಮೈ ನೆರೆದಾಗ ಸೋದರ ಮಾವನೇ ಈ ಕಾರ್ಯವನ್ನು ಮಾಡುವುದು, ಯಾರ ಕೆಟ್ಟ ಕಣ್ಣು ತಾಕದಿರಲು ಗುಡ್ಲು ಬಳಿ ಪೊರಕೆ, ಹಳೆಚಪ್ಪಲಿ, ಎಕ್ಕದಕುಡಿ ಇಡುವುದು ವಾಡಿಕೆ.

ಈ ಸಮುದಾಯದ ಸಾವಿನ ಶಾಸ್ತ್ರವೂ ತುಂಬಾ ವಿಶೇಷವಾಗಿದ್ದು ಮೃತಪಟ್ಟಾಗ ಹನ್ನೊಂದು ದಿವಸ ಸೂತಕ ಆಚರಿಸುವುದು. ಸತ್ತ ಮುರುದಿನಕ್ಕೆ ಹಾಲುತುಪ್ಪ ಬಿಡುವುದು. ಈ ಸಮುದಾಯದಲ್ಲಿ ಶವವನ್ನು ಹೂಳುವ ಪದ್ಧತಿ ರೂಢಿಯಲ್ಲಿದೆ. ಆದರೆ ಇತ್ತೀಚೆಗೆ ಶವವನ್ನು ಸುಡುವುದು ಕೂಡ ರೂಢಿಗೆ ಬಂದಿದೆ. ದೇಹವನ್ನು ಬಿಟ್ಟ ಆತ್ಮಕ್ಕೆ ಯಾವ ರೀತಿಯ ಲೋಪವಾಗಬಾರದೆಂದು ರೂಢಿ ಸಂಪ್ರದಾಯಗಳೊಂದಿಗೆ ಭಕ್ಷ್ಯಭೋಜನಗಳೊಂದಿಗೆ ಬೀಳ್ಕೊಡುತ್ತಾರೆ. ಸಮಾಧಿ ಪೂಜೆಯನ್ನು ಸತ್ತ ಮೂರನೇ ದಿನ, ಹನ್ನೊಂದನೇ ದಿನ ಮತ್ತು ಒಂದು ವರ್ಷಕ್ಕೊಮ್ಮೆ ಪೂಜಿಸುವುದು ರೂಢಿಯಲ್ಲಿದೆ. ಮೃತಪಟ್ಟ ಹಿರಿಯರೆಲ್ಲರಿಗೂ ಮಹಾಲಯ ಅಮಾವಾಸ್ಯೆಯಂದು ಪಿತೃಪಕ್ಷ ಆಚರಿಸುತ್ತಾರೆ. ಹಾಲುಮತ ಜನಾಂಗದಲ್ಲಿ ಸತ್ತವರಿಗೆ ಮಾಂಸಹಾರ ಎಡೆಯಿಡುವುದು ರೂಢಿಯಲ್ಲಿದೆ. ಇವರ ಯಾವುದೇ ಶುಭ ಕಾರ್ಯವನ್ನು ಇವರ ಲಾಂಛನವೆಂದೇ ಹೇಳುವ 'ಕಂಬಳಿ'ಯ ಮೇಲೆ ಕುಳಿತು ಮಾಡುತ್ತಾರೆ.ಕುರುಬರ ವೃತ್ತಿಯು ಮೂಲದಲ್ಲಿ ಕುರಿ–ಸಾಕಾಣಿಕೆಯೇ ಆದರೂ ಆಮೇಲೆ ಬದಲಾಗುತ್ತಾ ಬಂದ ಸಾಮಾಜಿಕ ಸನ್ನಿವೇಶವನ್ನು ಅನುಸರಿಸಿ ಅವರು ಬೇರೆಬೇರೆ ವೃತ್ತಿಗಳಲ್ಲಿ ತೊಡಗಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿ ಅವರ ಬದುಕು ಕೃಷಿ, ಕಂಬಳಿನೇಯ್ಗೆ ಮುಂತಾದವುಗಳತ್ತ ಮುಖಮಾಡಬೇಕಾಯಿತು. ಇವರು ತನ್ನ ಆಚರಣೆ ಸಂಪ್ರದಾಯ ಕಲೆ ಉದ್ಯೋಗ ಮುಂತಾದ ಜೀವನ ಪದ್ಧತಿಯಲ್ಲಿ ಮೂಲ ಪರಂಪರೆಯನ್ನು ಉಳಿಸಿಕೊಂಡು ಬಂದಿರುವುದನ್ನು ನಾವು ಇಂದಿಗೂ ಕಾಂಬಹುದು. ಇವರು ತಮ್ಮದೇ ಆದವಿಶಿಷ್ಟ ಮತ, ಸಂಪ್ರದಾಯಗಳಿಗೆ ಅಂಟಿಕೊಂಡು ಅನೇಕ ದೇವರುಗಳಿಗೆ ಆರಾಧಿಸುವುದು ಕಂಡು ಬಂದಿದೆ.

ಕುರುಬರ ಆರಾಧ್ಯದೈವ ಬೀರಪ್ಪ, ಕರಿಸಿದ್ದ, ಭರಮಪ್ಪ, ಅಮೋಘಸಿದ್ಧ, ಮಾಳಿಂಗರಾಯ, ಸಿದ್ದೇಶ್ವರ, ಮಾಯವ್ವ, ಲಕ್ಕವ್ವ, ಲಗಮವ್ವ ಆದರೂ ಸಹ ಇವರು ದಕ್ಷಿಣ ಕರ್ನಾಟಕ ಭಾಗದಲ್ಲಿ ಮಲೆಯ ಮಾದೇಶ್ವರ ಸಂಪ್ರದಾಯದ ದೇವರ ಗುಡ್ಡರಾಗಿ ಈ ಬುಡ್ಡಕಟ್ಟಿನವರು ಹೆಚ್ಚಾಗಿ ಕಂಡು ಬರುತ್ತಾರೆ. ಮಾದೇಶ್ವರನಿಗೆ ಹತ್ತಿರವಾದ ಭಕ್ತರಾಗಿ ಗುಡಿಗೋಪುರಗಳನ್ನು ಕಟ್ಟಿಸಿಕೊಟ್ಟ ಅಲಂಬಾಡಿ ಜುಂಜೇಗೌಡ ಕುರುಬನಾಗಿದ್ದನೆಂಬ ಅಂಶವನ್ನು ಮಾಲೆಯ ಮಾದೇಶ್ವರ ಕಾವ್ಯ ತಿಳಿಸುತ್ತದೆ. ಮಂಟೇಸ್ವಾಮಿ ಕಾವ್ಯದಲ್ಲಿ ಕುರುಬ ಗೌಡರ ಪ್ರಸ್ತಾಪವಿದ್ದು ಮಳವಳ್ಳಿಯ ಹೆಗ್ಗಡೆಗೌಡ, ಕಾಡಂಕನಹಳ್ಳಿಯ ಬೊಪ್ಪಗೌಡ ಪ್ರಮುಖರಾಗಿದ್ದಾರೆ.ಮೈಲಾರಲಿಂಗ ಕಾವ್ಯದಲ್ಲಿ ಮೈಲಾರಲಿಂಗ ವರಿಸಿದ ಹೆಣ್ಣು ಕುರುಬರ ಮಾಳಿ. ಚುಂಚನಗಿರಿ ಭೈರವನ ಸಂಪ್ರದಾಯದಲ್ಲೂ 'ಕುರುಬತಿ' ಮಾಳಮ್ಮನದೇ ಪ್ರಧಾನ ಪಾತ್ರ.

"ಕುರುಬತಿ ಕುಟ್ಟಾಡಿ ಕುರಿಯ ತಿಂಗಳ ಕಾದೆ
ಹಂಪೇಲಿ ಹಾಲ ಕರೆದುಂಡೆ........."

ಎಂಬ ಭೈರವನ ಕುರಿತ ಪ್ರಣಯ ಪದ್ಯಗಳಿವೆ.ಭೈರವನ ಉಪಪತ್ನಿ ಮಾಳವ್ವಳೇ ಕೋಮಲೆಯಾಗಿದ್ದು ಈಕೆ ಕುರುಬರ ಹೆಣ್ಣೇ ಎಂಬುದು ಇಲ್ಲಿ ಗಮನಾರ್ಹ. ಕರ್ನಾಟಕದ ಪ್ರಾಚೀನ ಸಂಸ್ಕೃತಿಯನ್ನು ರೂಪಿಸಿದವರಲ್ಲಿ ಒಬ್ಬರಾಗಿರುವ ಇವರು ಅನೇಕ ದೈವಗಳ ಆರಾಧಕರಾಗಿ ಕಂಡು ಬಂದಿದ್ದಾರೆ. ಶೈವ ವೈಷ್ಣವಗಳ ಸಂಗಮವೂ ಇವರಲ್ಲಿ ಇದಂತಿದ್ದು ಭರಮ ದೇವರ ಪೊಜೆಯನ್ನು ಗಮನಿಸಿದರೆ ತ್ರಿಮೂರ್ತಿಗಳೆಲ್ಲರನ್ನೂ ಇವರು ಒಪ್ಪಿಕೊಂಡಂತೆ ತೋರುತ್ತದೆ. ಇಂತ ದೈವೀ ಆಚರಣೆ ಹೊಂದಿರುವ ಹಾಲಿಮತಸ್ಥರಿಗೆ ತಮ್ಮ ಕುಲ ದೇವರನ್ನು ಪೂಜಿಸಲು ಹಬ್ಬ–ಜಾತ್ರೆಗಳಲ್ಲಿಈ ಸಮುದಾಯದಕ್ಕೆಂದೇ ಸೀಮಿತವಾದ ಪ್ರದರ್ಶನ ಕಲೆಗಳಲ್ಲಿ ಪ್ರಮುಖವಾಗಿ ಎರಡಿದೆ. ಒಂದು ದಕ್ಷಿಣ ಕರ್ನಾಟಕದ ಕಂಸಾಳೆಕುಣಿತದ ಕಲೆ ಮತ್ತೊಂದು ಉತ್ತರ ಕರ್ನಾಟಕದ ಗಂಡು ಕಲೆಯೆಂದು ಬಿಂಬಿತವಾಗಿರುವ ಡೊಳ್ಳುಕುಣಿತ.ಜನಪದ ಕಲೆಗಳ ಹುಟ್ಟಿಗೂ ಮನುಷ್ಯನ ಇತಿಹಾಸಕ್ಕೂ ಬಿಡಿಸಲಾಗದ ನಂಟಿಗೆ ಸಮುದಾಯವು ತನ್ನ ಜೀವನಾನುಭವಗಳಿಗೆ ಅಭಿವ್ಯಕ್ತಿಯ ರೂಪ ನೀಡಲು ಹವಣಿಸಿದಾಗ ಹಲವು ಬಣ್ಣಗಳು ಹುಟ್ಟಿಕೊಂಡವು. ಅವರನ್ನು ರಂಜಿಸುವ ಮತ್ತು ಜನರಲ್ಲಿ ಧಾರ್ಮಿಕತೆಯನ್ನು ಪ್ರಚೋದಿಸುವ ಕಲಾರೂಪಗಳು ಅವಿಷ್ಕಾರಗೊಂಡವು. ಈ ಕಲಾರೂಪಗಳನ್ನು ಜನಪದರ ಶ್ರದ್ದೆ, ಉಲ್ಲಾಸ, ಉತ್ಸಾಹ, ಭಕ್ತಿ ಮನೆಮಾಡಿದವು.

ಕರ್ನಾಟಕದ ಜನಪದ ಕಾವ್ಯ ಸಂಪ್ರದಾಯಗಳಲ್ಲಿ ಬೀರದೇವರ ಡೊಳ್ಳಿನ ಸಂಪ್ರದಾಯವೂ ಒಂದು. ಈ ಸಂಪ್ರದಾಯದಲ್ಲಿ ಎರಡು ರೂಪ, ಒಂದು ಡೊಳ್ಳುಕುಣಿತ ಮತ್ತೊಂದು ಡೊಳ್ಳಿಮೇಳ. ಇದನ್ನು ಕುರುಬರ ಮೇಳ ಎಂತಲ್ಲೂ ಕರೆಯುತ್ತಾರೆ. ಇದು ಉತ್ತರ ಕರ್ನಾಟಕದ ಸಂಪ್ರದಾಯವಾದರೂ ದಕ್ಷಿಣ ಕರ್ನಾಟಕದಲ್ಲಿ ಶಿವಮೊಗ್ಗ, ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು, ಬಳ್ಳಾರಿ, ಬೆಳಗಾವಿ, ಬಿಜಾಪುರ ಮತ್ತು ಬೆಂಗಳೂರು ಗ್ರಾಮಾಂತರಜಿಲ್ಲೆಗಳವರೆಗೂ ವ್ಯಾಪಿಸಿದೆ. ಮೊದಲಿಗೆ ಕುರುಬ ಜನಾಂಗದೊಂದಿಗೆ ನೇರ ಸಂಬಂಧ ಹೊಂದಿದ್ದ ಈ ಕುಣಿತವು ಕಾಲ ಕ್ರಮೇಣ ದೀವರು, ಉಪ್ಪಾರರು, ನಾಯಕರು ಹೀಗೆ ಮತ್ತಿತರ ಜನಾಂಗಗಳಿಗೂ ವ್ಯಾಪಿಸಿದೆ. ಕುರುಬಬುಡಕಟ್ಟುಜನರನ್ನು ವೃತ್ತಿ ಪ್ರಧಾನವಾಗಿ ಕರ್ನಾಟಕ ಗೌಡ ಜನಾಂಗದಲ್ಲಿ ಒಬ್ಬರಾಗಿದ್ದಾರೆ. ಒಕ್ಕಲಿಗಗೌಡ, ಕುರುಬಗೌಡ, ಗೊಲ್ಲಗೌಡ ಇವರೆಲ್ಲರೂ ಒಂದೇ ವರ್ಗದವರೆಂದರೆ ಆಶ್ಚರ್ಯವಿಲ್ಲ. ಒಕ್ಕಲಿಗರು ವ್ಯವಸಾಯವನ್ನು, ಕುರುಬರು ಕುರಿಸಾಕಣೆಯನ್ನು, ಗೊಲ್ಲರು ಗೋವು ಸಾಕಣೆಯನ್ನು ಪ್ರಧಾನ ವೃತ್ತಿಯಾಗಿ ಹಂಚಿಕೊಂಡು ಬಂದಿದ್ದಾರೆ.

ಕುರುಬರ ದೈವಗಳಲ್ಲಿ ಮೈಲಾರಲಿಂಗ ಮತ್ತು ಬೀರೇ ದೇವರ ಪ್ರಧಾನ ದೈವಗಳಾಗಿ ಕಂಡು ಬರುತ್ತವೆ. ಡೊಳ್ಳಿನ ಸಂಪ್ರದಾಯವನ್ನು ಭರಮದೇವರಿಗೂ, ಬೀರೇದೇವರಿಗೂ ಅರ್ಪಿಸಲಾಗಿದೆ. ಬೀರೇಶ್ವರನ ಭಕ್ತರು ಡೊಳ್ಳು, ಕೊಳಲು ಮತ್ತು ಜಲ್ಲರಿಗಳನ್ನು ಮುಖ್ಯವಾದ್ಯಗಳಾಗಿ ಬಳಸುತ್ತಾರೆ. ಈ ವಾದ್ಯಗಳಲ್ಲಿ ಡೊಳ್ಳಿಗೆ ಅಗ್ರಸ್ಥಾನ. ಶಿವನ ಪ್ರತಿರೂಪವೇ ಬೀರೇಶ್ವರ ಎಂಬುವುದು ಕುರುಬರ ನಂಬಿಕೆ. ಅದಕ್ಕಾಗಿ ಡೊಳ್ಳಿನ ವಾದ್ಯದೊಂದಿಗೆ ಶಿವನಿಗೆ ವಿಶೇಷವಾದ ಭಕ್ತಿ ಮೇರೆಯುತ್ತಾರೆ.ನಮ್ಮ ಜನಪದ ವಾದ್ಯಗಳಲ್ಲಿ ಡೊಳ್ಳು ಗಾತ್ರದಲ್ಲಿಯೂ, ನಾದದಲ್ಲಿಯೂ ದೊಡ್ಡದು. ಇದೊಂದು ರಣವಾದ್ಯದಂತೆ ಕಂಡು ಬರುತ್ತದೆ. ವೀರರು ಮಾತ್ರಬಹೊತ್ತು ಕುಣಿಯಬಹುದಾದ ಚರ್ಮವಾದ್ಯ ಇದಾಗಿದೆ. ಹಗುರವಾದ ಮರದ ಹೊಳಹು ಮತ್ತು ಬಳೆಗಳಿದ್ದು, ಎರಡು ಅಡಿ ಉದ್ದ ಮೂರು ಅಡಿ

ಸುತ್ತಳತೆಯ ಈ ವಾದ್ಯ ಬಾರಿಕೆಯ ವಾದ್ಯ. ಇದಕ್ಕೆ ತಾಳೆಯಮರ, ಬೈನೆಮರ ಮತ್ತು ಸುರಹೊನ್ನೆ ಮರಗಳನ್ನು ಬಳಸಲಾಗುತ್ತದೆ. ಪೀಪಾಯ ಆಕಾರದಲ್ಲಿ ಕೊರೆದ ಮರದ ಕೊಳವೆಗೆ ಒಂದು ಕಡೆ ಆಡಿನ ಚರ್ಮ, ಮತ್ತೊಂದು ಕಡೆಗೆ ಕುರಿ ಚರ್ಮವನ್ನು ಅಳವಡಿಸಲಾಗುತ್ತದೆ. ಈ ಚರ್ಮವನ್ನು ಭದ್ರವಾದ ಹುರಿಗಳಿಂದ ಬಿಗಿದು ಕಟ್ಟಲಾಗುತ್ತದೆ. ಡೊಳ್ಳಿನವರುತಮ್ಮ ವಾದ್ಯವನ್ನು ಬಾರಿಸಲು ಎರಡು ಕಡೆಗೂ ಕೋಲನ್ನು ಬಳಸುವುದು ಕಂಡು ಬರುವುದಿಲ್ಲ. ಡೊಳ್ಳಿನ ಬಡಿತವು ಸಾಮಾನ್ಯವಾಗಿ "ಗುಣಿ"ಯ ಲೆಕ್ಕದಲ್ಲಿರುತ್ತದೆ, ಒಂದು ಗುಣಿಗೆ ಮೊದಲ ಹೆಜ್ಜೆ ಎಂದು ಕರೆಯುತ್ತಾರೆ. ಬಲಗೈಯಲ್ಲಿ 'ಗುಣಿ'ಯೆಂಬ ಮೊಳದುದ್ದದ ತುಂಡುಗೋಲನ್ನು ಬಡಿಯಲು ಬಳಸಿದರೆ, ಎಡಗೈಯಲ್ಲಿ ಡೊಳ್ಳಿನ ಎಡಭಾಗವನ್ನು ಬಡಿಯುತ್ತಾರೆ. ಈ ನಾದಗಳು ಏಕಕಾಲದಲ್ಲಿ ಬರದೆ ಒಂದಾದ ಮೇಲೊಂದಂತೆ ಬಂದು ವೈವಿಧ್ಯವನ್ನು ನೀಡುತ್ತವೆ. ಬಹುದೂರದವರೆಗೆ ಕೇಳಿಬರುವ ಡೊಳ್ಳಿನ ಶಬ್ದ ಬಡಿಯುವವರಲ್ಲಿ ಕೇಳಿವವರಲ್ಲಿ ಪೌರುಷವನ್ನು ಚಿಗುರಿಸುತ್ತದೆ. ಆವೇಶವನ್ನು ತುಂಬುತ್ತದೆ. ಚರ್ಮವಾದ್ಯವಾದ ಡೊಳ್ಳಿಗೆ "ದಿಲ್ಲಿಗೆ ಹೋದರೂ ಒಂದೇ ಕೈ ಪೆಟ್ಟು" ಎಂಬ ಗಾದೆ ಮಾತಿದೆ.

ಸಾಮಾನ್ಯವಾಗಿ ಡೊಳ್ಳು ಬಾರಿಸುವವರು ದೇಹದ ಮೇಲುಭಾಗಕ್ಕೆ ಕರಿಯ ಕಂಬಳಿಯನ್ನು ಸೊಂಟದ ಭಾಗಕ್ಕೆ ಮೊಳಕಾಲು ಮೇಲೆ ಬರುವಂತೆ ಕಚ್ಚೆ ಹಾಕಿದ ಪಂಚೆ ಉಡುತ್ತಾರೆ. ಇಲ್ಲವೇ ಬರಿಮೈಗೆ ಸೊಪ್ಪು ಕಟ್ಟಿಕೊಳ್ಳುತ್ತಾರೆ. ಇಲ್ಲವೇ ಹುಲಿಯ ಚಮ್ದ ರೀತಿಯ ದಿರಿಸು ಧರಿಸುತ್ತಾರೆ. ಡೊಳ್ಳಿನ ಕುಣಿತವು ತನ್ನ ವಿಶಿಷ್ಟ ಶೈಲಿಗಳಿಂದಾಗಿ ಆಕರ್ಷಣೆಯಿಂದ ಕೂಡಿದೆ. ಕುಕ್ಕರಗಾಲಿನಲ್ಲಿ ಕುಳಿತು ಡೊಳ್ಳು ಬಾರಿಸುತ್ತಾ ಮುಂದಕ್ಕೆ ಕುಪ್ಪಳಿಸುವುದು, ಡೊಳ್ಳು ಬಾರಿಸುತ್ತಿದ್ದಂತೆ ಲಾಗಗಳನ್ನು ಹಾಕುವುದು, ಎಡಗಾಲು ಮಂಡಿಯನ್ನುನೆಲಕ್ಕೊತ್ತಿ ಬಲಗಾಲನ್ನೂರಿಕೊಂಡು ಡೊಳ್ಳು ಬಾರಿಸುವುದು, ಒಂದಡಿ ಇಲ್ಲವೇ ಎರಡಡಿ ಎತ್ತರದ ಮರಗಾಲುಗಲನ್ನು ಕಟ್ಟಿಕೊಂಡು ಕುಪ್ಪಳಿಸುತ್ತಾ ಡೊಳ್ಳು ಬಾರಿಸುವುದು, ಬಾಯಲ್ಲಿ ನೀರು ತುಂಬಿದ ಕೊಡವನ್ನು ಕಚ್ಚಿಕೊಂಡು ನೀರು ಚಲ್ಲದಂತೆ ಡೊಳ್ಳು ಬಾರಿಸುತ್ತಾ ಕುಣಿಯುವುದು, ತಮ್ಮ ಸೊಂಟದ ಹಿಂದೆ–ಮುಂದೆ ಡೊಳ್ಳುಗಳನ್ನು ಕಟ್ಟಿಕೊಂಡು ಅದರ ಮೇಲೆ ಚಿಕ್ಕ ಮಕ್ಕಳುಗಳನ್ನು ಕೂರಿಸಿಕೊಂಡು ಡೊಳ್ಳು ಬಾರಿಸುತ್ತ ಕುಣಿಯುವುದು, ಡೊಳ್ಳು ಬಾರಿಸುವ ಸಹ ಕಲಾವಿದರುಗಳನ್ನು ಹೆಗಲ ಮೇಲೆ ಕೂರಿಸಿಕೊಂಡು ಎಲ್ಲರು ಒಟ್ಟಿಗೇ ಡೊಳ್ಳು ಬಾರಿಸುವ ಹತ್ತಾರು ಬಗೆಯ ವೈವಿಧ್ಯಮಯ ಕಸರತ್ತುಗಳನ್ನು ಡೊಳ್ಳು ಕಲಾವಿದರು ಪ್ರದರ್ಶಿಸುತ್ತಾರೆ. ಈ ಕಸರತ್ತುಗಳೇ ಅಲ್ಲದೇ ಡೊಳ್ಳು ಕುಣಿತದಲ್ಲಿ ಕುದುರೆಕುಣಿತ, ಕೋಲುಕುಣಿತ, ಸಾರುಕುಣಿತ, ಹುಚ್ಚೆಳ್ಳುಬಡಿತ, ಕೈಬಾರಿಕೆ, ಒಂದ್ದೆಜ್ಜೆಕುಣಿತ, ಜೋಡುಸಾಲಿ, ಜಗ್ಗಿನಕೈಯಿ ಮೊದಲಾದ ವೈವಿಧ್ಯಮಯ ಕುಣಿತಗಳಿವೆ.

ಡೊಳ್ಳು ಕುಣಿತದಲ್ಲಿ ಬೃಹತ್ ಚರ್ಮವಾದ್ಯವಾದ ಡೊಳ್ಳಿನ ಜತೆಗೆ ಜೋಡು ಕಂಚಿನ ತಾಳ ಮತ್ತು ಹಿತ್ತಾಳೆಯ ಜಾಗಟೆ ವದನಕಾರರೂ ಇರುತ್ತರೆ. ಡೊಳ್ಳಿನ ಸಂಪ್ರದಾಯದಲ್ಲಿ ಕುಣಿತದೊಂದಿಗೆ ಡೊಳ್ಳುಮೇಳ ಎಂಬ ಮತ್ತೊಂದು ಪ್ರಕಾರವಿದೆ. ಈ ಡೊಳ್ಳುಮೇಳವನ್ನು "ಒಡ್ಡಿವಾಲಗ' ಎಂದು ಕರೆಯುತ್ತಾರೆ. ಡೊಳ್ಳಿನ ಹಾಡುಗಳಿಂದ ಕೂಡಿದ ಡೊಳ್ಳು ಮೇಳದಲ್ಲಿ ಮುಮ್ಮೇಳದವನು ಡೊಳ್ಳು ಬಾರಿಸುತ್ತಾ ಡೊಳ್ಳಿನ ಪದಗಳನ್ನು ಅದರಲ್ಲೂ ಬೀರಪ್ಪ ದೇವರ ಪದಗಳನ್ನು ಒಂದು ಸಾಲು ಹೇಳಿದರೆ, ಹಿಮ್ಮೇಳದವರು ಅದನ್ನು ಪುನರುಚ್ಚರಿಸುತ್ತಾರೆ. ಉತ್ತಮ ಸಾಹಿತ್ಯವನ್ನು ಒಳಗೊಂಡ ಡೊಳ್ಳಿನ ಪದಗಳ ಧಾಟಿ ಮಾತ್ರ ಏಕಾತಾನತೆಯಿಂದ ಕೂಡಿರುತ್ತದೆ. ದೈವೀ ಆರಾಧನೆಯ ಸಂಪ್ರದಾಯವಾಗಿ 'ಬೀರಪ್ಪನಡೊಳ್ಳು' ಎಂದೇ ಹೆಸರಾದ ಅದ್ಭುತ ಪ್ರದರ್ಶನ ಕಲೆಯಾಗಿದೆ.

ಡೊಳ್ಳುಮೇಳ ಧಾರವಾಡ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಡೊಳ್ಳನ್ನು ಕುಣಿಯುತ್ತಾ ಬಾರಿಸುವುದರೊಂದಿಗೆ ಡೊಳ್ಳಿನ ಪದಗಳನ್ನು ಹಾಡುವ ಸಂಪ್ರದಾಯವೂ ಇದೆ. ಸಾಮಾನ್ಯವಾಗಿ ಕುರುಬರೇ ಹೆಚ್ಚಾಗಿ ಡೊಳ್ಳಿನ ಪದಗಳನ್ನು ಹಾಡುತ್ತಾರಾದರೂ ತಳವಾರ, ಬಾರಿಕೇರ, ವಿಶ್ವಕರ್ಮ, ಮುಸಲ್ಮಾನ ಸಮುದಾಯಗಳಿಗೆ ಸೇರಿದವರು ಹಾಡುವುದುಂಟು. ಬೀರಪ್ಪನನ್ನು ಕುರಿತಂತೆ ಕೆಲವು ಬಿಡಿಹಾಡುಗಳನ್ನು ತಮ್ಮ ಮೇಳಗಳಿಗೆ ಅಳವಡಿಸಿಕೊಂಡಿದ್ದರೂ ಇದು ಪ್ರಧಾನ ವೃತ್ತಿಯಲ್ಲ.ಡೊಳ್ಳಿನ ಮೇಳ ಕೇವಲ ಕುರುಬ ಬುಡಕಟ್ಟಿಗೆ ಮಾತ್ರ ಮೀಸಲಾದುದಲ್ಲ.ಎಲ್ಲರಿಗೂ ಬೇಕಾದ ಹಾಡ್ಗತೆಗಳನ್ನು ಬಿಡಿಹಾಡುಗಳನ್ನು ಇದು ಒಳಗೊಂಡಿದೆ. ಭಾಗವಂತಿಕೆಮೇಳ, ಅಂಟಿಕೆ–ಪಂಟಿಕೆ ಮೇಳಗಳ ಜೊತೆಗೆ ಕುರುಬರ ಮೇಳವನ್ನು ಹೋಲಿಕೆ ಮಾಡಬಹುದಾಗಿದೆ. ಭಾಗವಂತಿಕೆ ಮೇಳದಲ್ಲಿ ಪಟ ಕುಣಿತವಿದ್ದಂತೆ, ಕುರುಬರ ಮೇಳದಲ್ಲಿ ಡೊಳ್ಳು ಕುಣಿತವಿದೆ. ಭರಮ ದೇವರು ಮತ್ತು ಬೀರೇದೇವರನ್ನು ಕುರಿತ ಪದ್ಯಗಳು ಅಪೂರ್ವವಾದವು. ಭಾವಗೀತೆಯ ಸತ್ವದಿಂದ ಕೂಡಿದವು. ಭಕ್ತಿಯ ಆವೇಶ ಅಲ್ಲಿ ತುಂಬಿ ತುಳುಕುತ್ತದೆ. ಶುದ್ಧ ಜನಪದ ಗೀತೆಗಳ ಹದವರಿತ ಶೈಲಿ ಇಲ್ಲಿ ಕಂಡುಬರುತ್ತದೆ. ಡೊಳ್ಳಿನಪದಗಳ ಪಲ್ಲವಿಯ ಆರಂಭ ಎಂದರೆ.

"ಶಿವನೆ ನಮ್ಮಯ ದೇವರು ಬಂದಾನ ಬನ್ನಿರೇ
ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೇ"

ಎಂಬ ಪಲ್ಲವಿಯೊಡನೆ ಆರಂಭ ಪಡೆಯುತ್ತದೆ. ಈ ಹಾಡುಗಳಲ್ಲಿ ಪ್ರಮುಖವಾಗಿ ಕುರುಬರ ಆರಾಧ್ಯದೈವರಾದ ರೇವಣಸಿದ್ದ, ಬೀರಪ್ಪ, ಮಾಳಿಂಗರಾಯ, ಅಮೋಘಸಿದ್ದ, ಕರಿಸಿದ್ದ, ಮೈಲಾರಲಿಂಗನಕತೆ, ಹಾಲಿಮತಪುರಾಣ, ಮಾರ್ಕಂಡೇಯಚರಿತ್ರೆ, ನಿಂಬೆಕ್ಕನಪದ, ಪಾಂಡವರಪದ, ತಿರುನೀಲಕಂಠ, ಬೀರಲಿಂಗೇಶ್ವರನಪದ, ರೇವಣಸಿದ್ದೇಶ್ವರ, ಮಾಳಪ್ಪ–ದ್ಯಾಮವ್ವ ಮುಂತಾದ ಪೌರಾಣೀಕ ಮತ್ತು ಭಕ್ತಿಪ್ರಧಾನ ಹಾಡುಗಳನ್ನು ಹಾಡುತ್ತಾರೆ.ಕುರುಬರ ಡೊಳ್ಳಿನ ಸಾಂಸ್ಕೃತಿಕ ಹಿನ್ನೆಲೆಯಿರುವ 'ಡೊಳ್ಳುಮೇಳ'ಗಳು ಬೀದರ್, ಗುಲ್ಬರ್ಗಾ, ಕೊಪ್ಪಳ, ಬಳ್ಳಾರಿ, ಧಾರವಾಡ, ವಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕಂಡು ಬರುತ್ತವೆ. ಈ ಡೊಳ್ಳು ಮ್ಯಾಳದಲ್ಲಿ ಒಟ್ಟು ಹನ್ನೆರಡು ಜನರಿರುತ್ತಾರೆ. ಮುಮ್ಮೇಳ–ಹಿಮ್ಮೇಳದವರು ತಾಳ ಬಾರಿಸುತ್ತಾ ಹಾಡುತ್ತಾರೆ. ಮ್ಯಾಳದಲ್ಲಿ ಹನ್ನೆರಡು ಡೊಳ್ಳುಗಳನ್ನು ಹನ್ನೆರಡು ಜನ ಬಾರಿಸುತ್ತಾರೆ. ಬೈಟೇಕ್ ಹಾಡುವಾಗ ಒಂದು ಡೊಳ್ಳು, ಎರಡು ಡೊಳ್ಳುಗಳ ಜೋಡಿ ತಾಳಗಳಿರುತ್ತವೆ. ಮುಮ್ಮೇಳದಲ್ಲಿ ಇಬ್ಬರು ಹಾಗೇಯೇ ಹಾಡುತ್ತಿರುತ್ತಾರೆ. ಹಿಮ್ಮೇಳದಲ್ಲಿಯೂ ಒಂದು ಡೊಳ್ಳು ಎರಡು ಜೋಡ ತಾಳಗಳಿರುತ್ತವೆ. ಉತ್ತರ ಕರ್ನಾಟಕದಲ್ಲಿ ಡೊಳ್ಳುಮೇಳವನ್ನೇ ಬದುಕಾಗಿಸಿಕೊಂಡಿರುವ ಬೆಳಗಾವಿಜಿಲ್ಲೆಯ ಮುಶೆಣ್ಣಗೋಳ ತಾಲ್ಲೂಕಿನ ಸಣ್ಣಿಂಗಪ್ಪ ಸತ್ರೆಪ್ಪ ನವರು ಬೇಡಜನಾಂಗಕ್ಕೆ ಸೇರಿದವರು. ಆದರೇ ಕುರುಬ ಸಮಾಜದ ಈ ಮೇಳವನ್ನು ಕರಗತ ಮಾಡಿಕೊಂಡಿದ್ದು "ವಾಲ್ಮೀಕಿ ಡೊಳ್ಳಿನ ಪದಮೇಳ–ತೆಳಗಿನಹಟ್ಟಿ" ಎಂಬ ಹೆಸರಿನ ಡೊಳ್ಳಮ್ಯಾಳ ಕಟ್ಟಿಕೊಂಡು ಬೀರಪ್ಪ–ಮಾರಪ್ಪ ದೇವರ ಪದಗಳು, ಕರುಬರ ಇತಿಹಾಸ, ಪುರಾಣ, ಕುರಿಕಂಬಳಿ ಕುರಿತ ಸಂಪ್ರದಾಯಕ ಹಾಡುಗಳನ್ನು ಹಾಡುತ್ತಾ ಬಂದಿದ್ದಾರೆ. ಡೊಳ್ಳುಮೇಳದಲ್ಲಿ 'ವಾದ್ಯಮೇಳ' ಮತ್ತು 'ಹಾಡುವಮೇಳ' ಎರಡು ವಿಧಗಳಿವೆ.

ಹುಕ್ಕೇರಿಯ ಕುರುಬ ಜನಾಂಗದವರೇ ಆದ ಗೈಬಣ್ಣ ಉದ್ದವದವಗೋಳ ಅವರು "ಲಗುಮವ್ವನ ಡೊಳ್ಳುಮ್ಯಾಳ"ಕ್ಕೆ ಸೇರಿಕೊಂಡು ಕುರುಬರ ಸಂಪ್ರದಾಯವನ್ನು ಹಾಡಿನ ಮೂಲಕ ಜನರಿಗೆ ತಲುಪಿಸುವ ಕಾರ್ಯ ನಡೆಸುತ್ತಿದ್ದಾರೆ.ಬೆಳಗಾವಿ ಜಿಲ್ಲೆ ರಾಮದುರ್ಗಾ ತಾಲ್ಲೂಕಿನ ಶಿವಪ್ಪ ಮೋಟೆ ಎನ್ನುವವರು ಕುರುಬ ಸಂಸ್ಕೃತಿಯ ಇತಿಹಾಸ,ಬೀರಪ್ಪನ ಲೀಲೆಯ ಕುರಿತಾದ ಪದಗಳನ್ನು ಕಟ್ಟಿ ಹಾಡುತ್ತಾ ಡೊಳ್ಳುಮೇಳ ಕಲೆಯಲ್ಲಿ ಜನಪದ ಕಲಾ ಸೇವೆ ಸಲ್ಲಿಸುತ್ತಿದ್ದಾರೆ.

ಒಟ್ಟಾರೆಯಾಗಿ ಕುರುಬ ಸಮಜದ ಡೊಳ್ಳುಕುಣಿತ ಎಂಬ ಪ್ರದರ್ಶನ ಕಲೆಯೂ ತಲೆ ಮಾರುಗಳಿಂದಲೂ ದೈವೀ ಆರಾಧನೆಯ ಸಂಪ್ರದಾಯವಾಗಿ ಬೀರಪ್ಪನ ಡೊಳ್ಳು ಎಂದೇ ಬೆಳೆದು ಬಂದ ಈ ಅದ್ಭುತ ಪ್ರದರ್ಶನ ಕಲೆಯು ಇತ್ತೀಚೆಗೆ ಧಾರ್ಮಿಕತೆಯ ಆವರಣದಿಂದ ಹೊರಬಂದು ಲೌಕಿಕ ಉತ್ಸವಗಳಿಗೆ ತೆರೆದುಕೊಂಡಿದೆ. ಇಂದು ಯಾವುದೇ ಸಮಾರಂಭವಾಗಲಿ, ಖಾಸಗಿ ಇರಲಿ ಅಥವಾ ಸಾರ್ವಜನಿಕವಿರಲಿ ಡೊಳ್ಳುಕುಣಿತವಿಲ್ಲದೆ ಕಳೆಗಟ್ಟಲಾರದು ಎನ್ನುವಂಥ ಸ್ಥಿತಿಯನ್ನು ಡೊಳ್ಳುಕಲಾವಿದರು ನಿರ್ಮಾಣ ಮಾಡಿದ್ದಾರೆ. 1987ರಲ್ಲಿಯೇ ಡೊಳ್ಳು ಕುಣಿತ ಭಾರತದ ಗಡಿ ಧಾಟಿ ರಷ್ಯಾದಲ್ಲಿ ಪ್ರದರ್ಶನಗೊಂಡಿರುವುದು ನಮ್ಮ ಕಲಾ ಸಂಸ್ಕೃತಿಗೆ ಹಿಡಿದ ಕನ್ನಡಿ ಎನ್ನಬಹುದು.

## ಗ್ರಂಥ ಋಣ


1. ಬೆಳಗಾವಿ ಜಿಲ್ಲೆಯ ಜನಪದ ಕಲಾವಿದರು – ಡಾ.ಸಿ.ಕೆ. ನಾವಲಗಿ
2. ಜೀ.ಶಂ.ಪ.ಅವರ ಜಾನಪದ ಬರಹಗಳು – ಪ್ರೋ.ಕಾಳೇಗೌಡ ನಾಗವಾರ ಡಾ.ಅಂಬಳಿಕೆ ಹಿರಿಯಣ್ಣ
3. ಹಾಲುಮತ ಸಂಸ್ಕೃತಿ–ಸಂಪುಟ–1 – ಡಾ. ಎಫ್.ಟಿ.ಹಳ್ಳಿಕೇರಿ
4. ಜಾನಪದ ವಿಹಾರ – ಕ್ಯಾತನಹಳ್ಳಿ ರಾಮಣ್ಣ
5. ಕನ್ನಡ ಜನಪದ ಕಲಾಪ್ರವೇಶ – ಡಾ. ಚಕ್ಕೆರೆ ಶಿವಶಂಕರ್
6. ಕರ್ನಾಟಕ ಕಲಾ ದರ್ಶನ ಸಂಪುಟ–2 – ಪ್ರೋ. ಎಂ.ಎಚ್. ಕೃಷ್ಣಯ್ಯ ಡಾ. ವಿಜಯಾ ಶ್ರೀ ಸಿ.ಆರ್.ಕೃಷ್ಣರಾವ್
7. ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ–1 – ಕನ್ನಡ ವಿಶ್ವವಿದ್ಯಾಲಯ, ಹಂಪಿ